ಕರ್ನಾಟಕ ಸರ್ಕಾರ
(ನೋಂದಣಿ ಮತ್ತು ಮುದ್ರಾಂಕ ಇಲಾಖೆ)

ಸಂಖ್ಯೆ : Comp/09/2003-04

ನೋಂದಣಿ ಮಹಾ ಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
8ನೇ ಮಹಡಿ, ಕಂದಾಯ ಭವನ
ಕೆಂಪೇಗೌಡ ರಸ್ತೆ, ಬೆಂಗಳೂರು- 09
ದಿನಾಂಕ : 27-04-2022.

**ಸುತ್ತೋಲೆ-30**

**ವಿಷಯ:** ಕಾವೇರಿ ಆನ್‌ಲೈನ್ ಸೇವೆಗಳ ಮುಖಾಂತರ ಸಾರ್ವಜನಿಕರಿಗೆ ಒದಗಿಸಲಾಗುತ್ತಿರುವ ಡಿಜಿಟಲ್ ಸಹಿವುಳ್ಳ ಋಣಭಾರ ಪ್ರಮಾಣ ಪತ್ರ ಹಾಗೂ ದೃಢೀಕೃತ ನಕಲು ಪ್ರತಿಗಳ ಕುರಿತು.

******

ಪ್ರಸ್ತಾವಿತ ವಿಷಯಕ್ಕೆ ಸಂಬಂಧಿಸಿದಂತೆ, ಕಾವೇರಿ ಆನ್‌ಲೈನ್ ಸೇವೆಗಳ ಮುಖಾಂತರ ಉಪನೋಂದಣಿ ಕಛೇರಿಗಳಿಂದ ಸಾರ್ವಜನಿಕರಿಗೆ ಒದಗಿಸಲಾಗುತ್ತಿರುವ ಋಣಭಾರ ಪ್ರಮಾಣ ಪತ್ರ ಹಾಗೂ ದೃಢೀಕೃತ ನಕಲುಗಳಿಗೆ ಮಾಹಿತಿ ತಂತ್ರಜ್ಞಾನ ಕಾಯ್ದೆ, 2000ರ ಕಲಂ-5ರ ಪ್ರಕಾರ ಉಪನೋಂದಣಾಧಿಕಾರಿಗಳು / ಸಿಬ್ಬಂದಿಗಳು ಡಿಜಿಟಲ್ ಸಹಿ ಮಾಡಿರುವುದರಿಂದ ಇಂತಹ ಪ್ರಮಾಣಪತ್ರ / ಪ್ರತಿಗಳಿಗೆ ಭೌತಿಕ ಸಹಿಯ ಅವಶ್ಯಕತೆ ಇರುವುದಿಲ್ಲ.

ಆದುದರಿಂದ ಸಾರ್ವಜನಿಕರಿಗೆ ಹಾಗೂ ಬ್ಯಾಂಕ್ ಅಧಿಕಾರಿಗಳಿಗೆ ಈ ಕುರಿತು ಮಾಹಿತಿ ನೀಡಲು ಮತ್ತು ಕಾವೇರಿ ಆನ್‌ಲೈನ್ ಸೇವೆಗಳ ಮುಖಾಂತರ ನೀಡಲಾಗಿರುವ ಪ್ರಮಾಣ ಪತ್ರ / ನಕಲು ಪ್ರತಿಗಳಿಗೆ ಮತ್ತೊಮ್ಮೆ ಭೌತಿಕ ಸಹಿ ಮಾಡಬಾರದೆಂದು ಈ ಮೂಲಕ ಸೂಚಿಸಿದೆ.

27/4

**ನೋಂದಣಿ ಮಹಾಪರಿವೀಕ್ಷಕರು ಮತ್ತು**
**ಮುದ್ರಾಂಕಗಳ ಆಯುಕ್ತರು, ಬೆಂಗಳೂರು.**

**ಇವರಿಗೆ,**

ರಾಜ್ಯದ ಎಲ್ಲಾ ಜಿಲ್ಲಾನೋಂದಣಾಧಿಕಾರಿಗಳಿಗೆ ಹಾಗೂ ಉಪನೋಂದಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.